## ಸಕಾರಣ!



ಸಿದ್ದೇಶಿ: ಲೋ ಮಲ್ಲೇಶಿ, ನಿನ್ನೆ ರಾತ್ರಿ ನಿಮ್ಮನೇಲಿ ಅಷ್ಟು ಗಲಾಟೆ ಯಾಕೋ? ಏನ್ಮಾಡ್ದೆ?
ಮಲ್ಲೇಶಿ: ಅಯ್ಯೋ ಏನ್ಹೇಳೋದು ಸಿದ್ದೇಶಿ, ನಮ್ಮಪ್ಪಾ ಅಮ್ಮಂದೇ ಸಮಸ್ಯೆ ಕಣೋ
ಸಿದ್ದೇಶಿ: ಯಾಕೆ, ಏನಾಯ್ತು?
ಮಲ್ಲೇಶಿ: ಮೊನ್ನೆ ಸಂಘದವ್ರು ಆದರ್ಶ ದಂಪತಿಗಳು ಬಿರುದು ಕೊಟ್ಟು ಸನ್ಮಾನಿಸಿರೋದೇ ಪ್ರಮಾದ ಆಗಿದೆ ಕಣೋ.
ಸಿದ್ದೇಶಿ: ನಿಮ್ಮಪ್ಪಾ ಅಮ್ಮನ್ನ ಸನ್ಮಾನಿಸಿರೋದು ಹೆಮ್ಮೆ, ಸಂತಸ ಪಡೋ ವಿಷಯ ಅಲ್ವೇನೋ. ಅದರಲ್ಲಿ ಏನ್ ಸಮಸ್ಯೆ?
ಮಲ್ಲೇಶಿ: ಖುಷಿ ಪಡೋ ಬದ್ಲು ತಲೆ ಚಚ್ಕೊಳ್ಳೋ ಹಾಗಾಗಿದೆ. ಅವರನ್ನು ಯಾಕಾದ್ರೂ ಸನ್ಮಾನಿಸಿದ್ರೋ ಬಹುಮಾನ ದೊರೆತದ್ದೇ ನನ್ನಿಂದ ಅಂತ ಅಪ್ಪ, ನನ್ನಿಂದಲೇ ಅಂತ ಅಮ್ಮ! ಅರಚಾಟಕ್ಕೆ ನನಗೋ ನಿದ್ದೇನೇ ಇಲ್ಲ ಕಣೋ!

**ಲತಾ ಹೆಗಡೆ**

## ಹೀಗೊಂದು ಕಾರು ಸಾಲ!

ತಿಮ್ಮ ನಗರದ ಬ್ಯಾಂಕ್ ಮ್ಯಾನೇಜರ್ ಬಳಿ ಹೋಗಿ, 'ಸರ್, ನನ್ನ ಹೊಸ ಕಾರನ್ನು ಗಿರವಿ ಇರಿಸಿಕೊಂಡು ಹತ್ತು ರೂಪಾಯಿ ಸಾಲ ಬೇಕಿತ್ತು ಕೊಡಬಹುದೇ?' ಎಂದು ಕೇಳಿದ. ಮ್ಯಾನೇಜರ್ ಕಾರನ್ನು ಬ್ಯಾಂಕಿನ ಗೋದಾಮಿನಲ್ಲಿರಿಸಿಕೊಂಡು ಅವನಿಗೆ ಸಾಲದ ಹಣ ನೀಡಿದರು.

ವಾರದ ಬಳಿಕ ತಿಮ್ಮ ಮತ್ತೆ ಬ್ಯಾಂಕಿಗೆ ಬಂದು ಬಡ್ಡಿಯೊಂದಿಗೆ ಸಾಲ ಮರಳಿಸಿ ಕಾರನ್ನು ಹಿಂದಕ್ಕೆ ಪಡೆದ. ಮ್ಯಾನೇಜರ್ ಅಚ್ಚರಿಯಿಂದ, 'ಹೊಸ ಕಾರನ್ನು ನೀವು ಕೇವಲ ಹತ್ತು ರೂಪಾಯಿಗೆ ಗಿರವಿ ಇಡುವ ಅಗತ್ಯವೇನಿತ್ತು?' ಕೇಳಿದರು.

'ನಾನು ಈ ಪಟ್ಟಣಕ್ಕೆ ಹೊಸದಾಗಿ ಬಂದವನು. ಗೆಳೆಯರ ಜೊತೆಗೆ ಅವರ ಕಾರಿನಲ್ಲಿ ಊರು ಸುತ್ತಲು ಹೋಗುವಾಗ ನನ್ನ ಕಾರನ್ನು



ಪಾರ್ಕಿಂಗ್ ಮಾಡಲು ಯೋಗ್ಯ ಸ್ಥಳ ಬೇರೆಲ್ಲಿಯೂ ಸಿಕ್ಕಿರಲಿಲ್ಲ' ಎಂದ ತಿಮ್ಮ!

**ಪ. ರಾಮಕೃಷ್ಣ ಶಾಸ್ತ್ರಿ**